**OS-25/2019 P.W.3**

ದಿನಾಂಕ 11.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು :</u> 1 ರಿಂದ 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಂ ಎಲ್ ವಕೀಲರಿಂದ :-

ಚಂದ್ರಪ್ಪ ನನಗೆ ಗೊತ್ತು. ಚಂದ್ರಪ್ಪನಿಗೆ ದಾವಾ ಆಸ್ತಿಯು ಅವರ ತಾಯಿಯ ಕಡೆಯಿಂದ ಬಂದಿರುತ್ತದೆ ಎಂದರೆ ಸಾಕ್ಷಿಯು ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಚಂದ್ರಪ್ಪನ ತಾಯಿ ಮರಣ ಹೊಂದಿದ ನಂತರ ದಾವಾ ಆಸ್ತಿಯು ಚಂದ್ರಪ್ಪನಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೆ ಬಿ ಬಸಪ್ಪನವರಿಗೆ ಚಂದ್ರಪ್ಪ ಮಾರಾಟ ಮಾಡಿದ್ದರು ಎಂದರೆ ಹಾಗೆಂದು ಮಾತನಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕೆ ಬಿ ಬಸಪ್ಪನಿಂದ ಪುನಃ ಚಂದ್ರಪ್ಪ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಹಾಗಾಗಿ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಚಂದ್ರಪ್ಪನ ಮಕ್ಕಳು ಎಲ್ಲರು ಉಳುಮೆ ಮಾಡುತ್ತಿದ್ದರು ಅಷ್ಟು ನನಗೆ ಗೊತ್ತು ಎಂದು ನುಡಿಯುತ್ತಾರೆ. ಚಂದ್ರಪ್ಪ ಮಾತ್ರ ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದರು ಮತ್ತು ಅವರ ಮಕ್ಕಳಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಚಂದ್ರಪ್ಪ ನವರು ಇಷ್ಟ ಪಟ್ಟು 4 ನೇ ಪ್ರತಿವಾದಿಗೆ ಈ ಜಮೀನನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನಗೆ 4 ನೇ ಪ್ರತಿವಾದಿಯು 5 ನೇ ಪ್ರತೀವಾದಿಗೆ 2 ಎಕರೆ 2 ಗುಂಟೆ ಜಮೀನ್ನು ಮಾರಾಟ ಮಾಡಿ ಅನುಭವದಲ್ಲಿ ಇರುವ ವಿಷಯ ಗೊತ್ತು. ವಾದಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು :</u> 5 ನೇ ಪ್ರತಿವಾದಿಯರ ಪರವಾಗಿ ಶ್ರೀ ಬಿ ಟಿ ಕೆ ವಕೀಲರಿಂದ :-

5 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ 2 ಎಕರೆ 2 ಗುಂಟೆ ಜಮೀನನ್ನು ಖರೀದಿ ಮಾಡಿ ಸುಮಾರು 10-12 ವರ್ಷ ಆಗಿದೆ ಎಂದರೆ ಸರಿ. ಮಾರಿದ ನಂತರ 5 ನೇ ಪ್ರತಿವಾದಿ ಅಡಿಕೆ ತೋಟ ಮಾಡಿದ್ದು ಅದಕ್ಕೂ ಮೊದಲು ತೆಂಗಿನ ತೋಟ ಇತ್ತು ಎಂದರೆ ಸರಿ. ಕೊಳವೆ ಬಾವಿ ಮತ್ತು ವಿದ್ಯುಚ್ಛಕ್ತಿ ಸಂಪರ್ಕವನ್ನು 5 ನೇ ಪ್ರತಿವಾದಿ ಸದರಿ ಜಮೀನಿಗೆ ಪಡೆದಿರುತ್ತಾರೆ ಎಂದರೆ ಸರಿ. ಲಕ್ಷಾಂತರ ಹಣವನ್ನು ತೋಟ ಮಾಡಲು 5 ನೇ ಪ್ರತಿವಾದಿ ಖರ್ಚು ಮಾಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯು ಮುಂಚಿನಿಂದ ಅವರ ಕುಟುಂಬಕ್ಕೆ ಹೇಗೆ ಬಂದಿರುತ್ತದೆ ಎಂದು ನನಗೆ

ಗೊತ್ತಿಲ್ಲ. ಆದರೆ ಅವರ ಕುಟುಂಬದವರು ಒಟ್ಟಾಗಿ ಉಳುಮೆ ಮಾಡುವುದನ್ನು ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ನಾನು ತಿಳಿದುಕೊಂಡಿರುವಂತೆ ಅದು ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ವಾದಿಯ ಕುಟುಂಬಕ್ಕೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಇಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ವಾದಿಯ ಪರವಾಗಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ್ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.